Reg. No. | | | | | | | | | |

# BASKAO 254

**Credit Based IV Semester B.A. Degree**
**Examination September 2022**
**(Common to All Batches)**
**KANNADA (Optional)**

**ಪತ್ರಿಕೆ – IV : ಕಾವ್ಯ, ಸಾಹಿತ್ಯ ಚರಿತ್ರೆ ಮತ್ತು ಛಂದಸ್ಸು**

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 120

I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×15=45)**

1) ದೇಹವೇ ದೇಗುಲ ಎಂಬ ಪರಿಕಲ್ಪನೆ ವಚನಕಾರರಲ್ಲಿ ಅಭಿವ್ಯಕ್ತಿಯಾದ ಬಗೆಯನ್ನು ವಿವರಿಸಿ.

**ಅಥವಾ**

ಕಾಯಕವು ಅರಿವು ಮತ್ತು ಮುಕ್ತಿಗೆ ಕಾರಣವಾಗುವ ಬಗೆಯನ್ನು ವಿವೇಚಿಸಿ.

2) ಮಕ್ಕಳನ್ನು ಕಳೆದುಕೊಂಡ ಧೃತರಾಷ್ಟ್ರ-ಗಾಂಧಾರಿಯರ ದುಃಖವನ್ನು ರನ್ನನ ಕಾವ್ಯಭಾಗದ ಆಧಾರದಲ್ಲಿ ವಿವರಿಸಿ.

**ಅಥವಾ**

ಸಂಕಮ್ಮ ತನ್ನ ಗಂಡನಿಗೆ ಭಾಷೆ ಕೊಡದಿರಲು ಕಾರಣವೇನು ? ಅದರ ಪರಿಣಾಮವನ್ನು ವಿವೇಚಿಸಿ.

3) ದಾಸಸಾಹಿತ್ಯಕ್ಕೆ ಪುರಂದರದಾಸರು ಹಾಗೂ ಕನಕದಾಸರ ಕೊಡುಗೆಯನ್ನು ವಿವೇಚಿಸಿ.

**ಅಥವಾ**

ಸಾಂಗತ್ಯದಲ್ಲಿ ಬಂದಿರುವ ಪ್ರಮುಖ ಕೃತಿಗಳನ್ನು ಪರಿಚಯಿಸಿ.

II. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×10=10)**

1) ರಗಳೆ ಎಂದರೇನು ? ರಗಳೆಯ ಉಗಮ ಹಾಗೂ ವಿಕಾಸದ ಕುರಿತು ಬರೆಯಿರಿ.
2) ತ್ರಿಪದಿ ಎಂದರೇನು ? ತ್ರಿಪದಿ ಛಂದಸ್ಸಿನ ಪ್ರಾಚೀನತೆಯನ್ನು ಗುರುತಿಸಿ.

ಆ) ಕೆಳಗಿನ ಯಾವುದಾದರೂ **ಒಂದು** ಪದ್ಯದ ಸಾಲಿಗೆ ಪ್ರಸ್ತಾರ ಹಾಕಿ ಗಣ ವಿಂಗಡಣೆ ಮಾಡಿ ಛಂದಸ್ಸನ್ನು ಗುರುತಿಸಿ. **(1×5=5)**

1) ಈಶನ ಕರುಣೆಯ
ನಾಶಿಸು ವಿನಯದಿ
ದಾಸನ ಹಾಗೆಯೆ ನೀಮನವೇ

2) ಕಡುಮೂರ್ಖತನದೊಳು ಕಡೆಗಣಿಸುವ
ಬಿಡುನುಡಿಗಳ ಬಿತ್ತರಿಸುವ

**P.T.O.**

III. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ಉದ್ಧಾಲಕ ಹಾಗೂ ಚಂಡಿಯ ದಾಂಪತ್ಯದ ವೈರುಧ್ಯವನ್ನು ಲಕ್ಷ್ಮೀಶ ಕಂಡ ಬಗೆಯನ್ನು ವಿವರಿಸಿ.

**ಅಥವಾ**

ಪ್ರೇಮಿಗಳ ದುರಂತ ಚಿತ್ರ ಪಂಪ ಹಾಗೂ ಬಿ.ಎಂ.ಶ್ರೀ.ಯವರಲ್ಲಿ ಚಿತ್ರಣಗೊಂಡ ಬಗೆಯನ್ನು ವಿವರಿಸಿ.

2) ಸಾಂಗತ್ಯಕ್ಕೆ ರತ್ನಾಕರವರ್ಣಿಯ ಕೊಡುಗೆಯನ್ನು ವಿವರಿಸಿ.

**ಅಥವಾ**

ಸರ್ವಜ್ಞನ ತ್ರಿಪದಿಗಳ ವೈಶಿಷ್ಟ್ಯವನ್ನು ವಿವೇಚಿಸಿ.

3) ಷಟ್ಪದಿ ಎಂದರೇನು ? ಯಾವುದಾದರೂ ಎರಡು ಷಟ್ಪದಿಗಳನ್ನು ಉದಾಹರಣೆ ಸಹಿತ ವಿವರಿಸಿ.

**ಅಥವಾ**

ಸಾಂಗತ್ಯ ಎಂದರೇನು ? ಸಾಂಗತ್ಯದ ಲಕ್ಷಣಗಳನ್ನು ಉದಾಹರಣೆಯೊಂದಿಗೆ ವಿವರಿಸಿ.

IV. ಅ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ರನ್ನ
2) ಅಕ್ಕಮಹಾದೇವಿ
3) ಲಕ್ಷ್ಮೀಶ
4) ಬಿ.ಎಂ.ಶ್ರೀ.

ಆ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಹದಿಬದೆಯ ಧರ್ಮ
2) ತತ್ತ್ವಪದ
3) ವಾದಿರಾಜರು
4) ಶತಕ ಕಾವ್ಯ.

ಇ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ತ್ರಿಪದಿಯ ವಿಧಗಳು
2) ಉದ್ದಂಡ ಷಟ್ಪದಿ
3) ಏಳೆ
4) ನಾಗವರ್ಮ.

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ. **(12×1=12)**

1) ಪಂಪನ ಲೌಕಿಕ ಕಾವ್ಯವನ್ನು ಹೆಸರಿಸಿ.

2) ಅಲ್ಲಮಪ್ರಭುವಿನ ಅಂಕಿತನಾಮವೇನು ?

3) ‘ಹರಿಭಕ್ತಿಸಾರ’ ಕೃತಿಯ ಕರ್ತೃ ಯಾರು ?

4) ‘ಇಂಗ್ಲೀಷ್ ಗೀತ’ಗಳನ್ನು ಬರೆದ ಕವಿ ಯಾರು ?

5) ದಾಸಕೂಟ–ಪದಕ್ಕಿರುವ ಅರ್ಥವೇನು ?

6) ರನ್ನನನ್ನು ಶಕ್ತಿಕವಿ ಎಂದು ಕರೆದವರು ಯಾರು ?

7) ‘ಇಂದ್ರಚಾಪ’ವನ್ನು ಬರೆದ ಕವಿ ಯಾರು ?

8) ರತ್ನಾಕರವರ್ಣಿಯ ಊರು ಯಾವುದು ?

9) ‘ರಾಮಧಾನ್ಯಚರಿತೆ’ ಕೃತಿಯ ಕರ್ತೃವನ್ನು ಹೆಸರಿಸಿ.

10) ತ್ರಿಪದಿಯ ಮೊದಲ ದಾಖಲೆ ಯಾವ ಶಾಸನದಲ್ಲಿ ದೊರೆಯುತ್ತದೆ ?

11) ವಾದಿರಾಜರ ಅಂಕಿತನಾಮವೇನು ?

12) ಲಲಿತ ರಗಳೆಯ ಒಂದು ಪಾದದಲ್ಲಿ ಎಷ್ಟು ಮಾತ್ರೆಗಳಿರುತ್ತವೆ ?